ಪ್ರಾಣಾಂತಿಕ ಉಪವಾಸದ ಸತ್ಯಾಗ್ರಹವನ್ನು ಆಚರಿಸುವವ ನಾನೊಬ್ಬನೇ ಅಲ್ಲ, ನನ್ನಂತಹ ವಿಚಾರಸರಣಿಯುಳ್ಳ ಅನೇಕ ಸುಧಾರಕರು ಭಾರತದಲ್ಲಿರುವವರು. ಅವರೆಲ್ಲರು ಈ ಮಾರ್ಗವನ್ನನುಸರಿಸದೇ ಇರಲಾರರು ಎಂಬುದನ್ನು ಹೊಣೆಗಾರ ಹಿಂದೂ ಮುಖಂಡರು ವಿಚಾರ ಮಾಡಬೇಕು. ನನ್ನೊಡನೆ ಕಾರ್ಯ ಮಾಡಿದ ಸುಧಾರಕರೂ, ಈ ಉಪವಾಸದ ಮರ್ಮವನ್ನರಿಯಬೇಕು.

ನನ್ನ ಮನಸ್ಸಿನಲ್ಲಿ ಭ್ರಮೆ ಅಥವಾ ಜ್ಞಾನ ಉದಯವಾಗಿರಬೇಕು. ಒಂದು ವೇಳೆ ಭ್ರಮೆಯಾಗಿದ್ದರೆ ನಾನು ಅಂತಃಕರಣಪೂರ್ವಕವಾಗಿ ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳಲು ಅನುಕೂಲವಾಗಿ ಹಿಂದೂ ಧರ್ಮದ ಮೇಲಿನ ಒಂದು ಭಾರವು ಇಳಿದಂತಾಗುವುದು. ಒಂದು ವೇಳೆ ಜ್ಞಾನೋದಯವೇ ಆಗಿದ್ದರೆ, ನನ್ನ ಕಷ್ಟದಿಂದ ಹಿಂದೂ ಧರ್ಮಕ್ಕೆ ಶುದ್ಧ ಹಾಗೂ ನಿಷ್ಕಳಂಕ ಸ್ವರೂಪ ಪ್ರಾಪ್ತವಾದೀತು. ನನ್ನ ವಿಷಯದಲ್ಲಿ ಅವಿಶ್ವಾಸವಿದ್ದ ಜನರ ಅಂತಃಕರಣವೂ ಶುದ್ಧವಾದೀತು. ಅಸ್ಪೃಶ್ಯ ವರ್ಗಕ್ಕೆ ಯಾವುದೇ ಬಗೆಯ ಕಾಯಿದೆಬದ್ಧ ಸ್ವತಂತ್ರ ಮತದಾರ ಸಂಘ ನಿರ್ಮಾಣವಾಗುವುದರ ವಿರುದ್ಧವೇ, ಈ ನನ್ನ ಉಪವಾಸವಿರುತ್ತದೆಂದು ನಾನು ಮತ್ತೊಮ್ಮೆ ಸಾರುತ್ತೇನೆ. ಯಾಕೆಂದರೆ, ನನ್ನ ಉಪವಾಸದ ಬಗ್ಗೆ ತರ್ಕವಿತರ್ಕ, ತಪ್ಪು ತಿಳಿವಳಿಕೆ ಉಂಟಾದುದೇ ಈ ಘೋಷಣೆಯ ಉದ್ದೇಶ. ಈ ಭೀತಿಯು ದೂರವಾದೊಡನೆಯೇ ನಾನು ನನ್ನ ಉಪವಾಸವನ್ನು ನಿಲ್ಲಿಸುವೆ. ಈ ಪ್ರಶ್ನೆಯನ್ನು ಬಿಡಿಸುವ ಹಾಗೂ ಅವರಿಗೆ ಯೋಗ್ಯ ಪ್ರಾತಿನಿಧ್ಯವಿರುವ ನಿಶ್ಚಿತವಾದ ಮಾರ್ಗವು ನನ್ನಲ್ಲಿದೆ. ಆದರೆ, ನಾನು ಕೈದಿಯಿರುವುದರಿಂದ ಜನರೆದುರಿಗೆ ಅದನ್ನು ಇಡಲು ಅಯೋಗ್ಯನಿರುವೆ. ಸವರ್ಣ ಹಿಂದೂಗಳು ಹಾಗೂ ಅಸ್ಪೃಶ್ಯ ವರ್ಗದ ಮುಖಂಡರೂ ಕೂಡಿ ಸಂಯುಕ್ತ ಮತದಾರ ಸಂಘದ ತತ್ವದ ಮೇಲೆ, ಯಾವುದೊಂದು ಕರಾರನ್ನು ಮಾಡಿಕೊಂಡು, ಸರ್ವ ಹಿಂದೂಗಳ ಸಾರ್ವಜನಿಕ ಸಭೆಯಲ್ಲಿ ಅದಕ್ಕೆ ಮಾನ್ಯತೆ ದೊರೆತರೆ ಅದನ್ನು ನಾನು ಒಪ್ಪಲು ಸಿದ್ಧನಿರುವೆ.

ಆದರೆ, ನಾನು ಒಂದು ಪ್ರಶ್ನೆಯನ್ನು ಸ್ಪಷ್ಟಮಾಡಬಯಸುತ್ತೇನೆ. ಅಸ್ಪೃಶ್ಯರ ಪ್ರಶ್ನೆಯು ಯೋಗ್ಯ ರೀತಿಯಿಂದ ಬಿಡಿಸಲ್ಪಟ್ಟು ಅದು ನನಗೆ ಮಾನ್ಯವಾದರೆ, ಜಾತಿಯ ಪ್ರಶ್ನೆಯ ವಿಷಯದಲ್ಲಿ ಸರಕಾರವು ಘೋಷಿಸಿದ ಉಳಿದೆಲ್ಲ ಪ್ರಶ್ನೆಗಳನ್ನು ನಾನು ಮಾನ್ಯಮಾಡಿದೆನೆಂದು ತಿಳಿಯಕೂಡದು. ಅದರಲ್ಲಿಯ ಅನೇಕ ಭಾಗಗಳಿಗೆ ನನ್ನ ವೈಯಕ್ತಿಕ ವಿರೋಧವಿದೆ. ಈ ನಿರ್ಣಯವು ಒಂದು ವೇಳೆ ಅಮಲಿನಲ್ಲಿ ಬಂದರೆ ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಯ ಸಮಾಧಿಯಾಯಿತೆಂದೇ ನನ್ನ ಮತ. ಈ ಪ್ರಶ್ನೆಯು ಸಮಾಧಾನಕರವಾಗಿ ಬಿಟ್ಟೀತೆಂದು ಮುಂದೆ ಯೋಚಿಸಲ್ಪಡುವ ಎಲ್ಲ ಸುಧಾರಣೆಗಳಿಗೆ ನಾನು ಬದ್ಧನೆಂದೂ ತಿಳಿಯಕೂಡದು. ಈ ಪ್ರಶ್ನೆಯು ರಾಜಕೀಯವಿದ್ದು, ಕಾಂಗ್ರೆಸ್ಸು ವಿಚಾರ ಮಾಡಿ ತನ್ನ ಮತವನ್ನು ಕೊಡಬಹುದು. ನಾನು ಕೈದಿಯಿರುವುದರಿಂದ

